# ಕರ್ನಾಟಕ ವಿಧಾನ ಪರಿಷತ್ತು

| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 16(107) |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.12.2024 |
| ಉತ್ತರಿಸುವವರು | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆಯಲ್ಲಿ ಇರುವ ಒಟ್ಟು ಅರಣ್ಯ ಭೂಮಿಯ ವಿಸ್ತರ್ಣವೆಷ್ಟು; ಇದರಲ್ಲಿ ಸಾಮಾಜಿಕ ಅರಣ್ಯ ಮೀಸಲು ಅರಣ್ಯ, ಡೀಮ್ಡ್ (ಪರಿಭಾವಿತ ಅರಣ್ಯ ಪ್ರದೇಶ ಎಷ್ಟು (ತಾಲ್ಲೂಕುವಾರು ಅರಣ್ಯ ವಿಧದ ಪ್ರಕಾರ ವಿಸ್ತೀರ್ಣ ನೀಡುವುದು) | ತುಮಕೂರು ವಿಭಾಗದಲ್ಲಿ ಇರುವ ವಿವಿಧ ಅರಣ್ಯ ಪ್ರದೇಶಗಳ ವಿಸ್ತೀರ್ಣ ವಿವರ ಈ ಕೆಳಗಿನಂತಿದೆ.<br>**ಕ್ರ.ಸಂ** / **ವಿವರ** / **ವಿಸ್ತೀರ್ಣ (ಹೆ.ಗಳಲ್ಲಿ)**<br>1 / ಮೀಸಲು ಅರಣ್ಯ / 80969.45<br>2 / ಗ್ರಾಮ ಅರಣ್ಯ / 3212.44<br>3 / ರಕ್ಷಿತ ಅರಣ್ಯ / 3964.38<br>4 / ಸೆಕ್ಷನ್-4 / 12962.70<br>5 / ಡೀಮ್ಡ್ ಫಾರೆಸ್ಟ್ / 13388.64<br>**ಒಟ್ಟು: 114497.61**<br>ತಾಲ್ಲೂಕು/ವಲಯವಾರು ಅರಣ್ಯದ ವಿಸ್ತೀರ್ಣದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಸದರಿ ಅರಣ್ಯಗಳನ್ನು ಭೂ ಮಾಪನ ಮಾಡಲಾಗಿದೆಯೇ; ಮಾಡದಿದ್ದಲ್ಲಿ ಯಾವ ವರ್ಷ ಮಾಡಲಾಗಿದೆ, ಮಾಡದೆ ಇದ್ದಲ್ಲಿ ಮಾಡದಿರಲು ಕಾರಣಗಳೇನು ಯಾವ ಕಾಲ ಮಿತಿಯಲ್ಲಿ ಭೂ ಮಾಪನ ಮಾಡಲಾಗುವುದು; | ಜಿಲ್ಲೆಯಲ್ಲಿ ಅಧಿಸೂಚನೆಯಾಗಿರುವ ಮೀಸಲು ಅರಣ್ಯ, ಗ್ರಾಮ ಅರಣ್ಯ ಹಾಗೂ ರಕ್ಷಿತ ಅರಣ್ಯ, ಸೆಕ್ಷನ್-4 ಅರಣ್ಯ ಪ್ರದೇಶಗಳ 161 ಬ್ಲಾಕ್‌ಗಳ ಪೈಕಿ, ಈವರೆಗೆ 105 ಬ್ಲಾಕ್‌ಗಳ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ. ಅನುದಾನದ ಲಭ್ಯತೆ ಮೇರೆಗೆ ಬಾಕಿ ಇರುವ ಬ್ಲಾಕ್‌ಗಳ ಸರ್ವೆ ಕಾರ್ಯವನ್ನು ಪ್ರತಿ ವರ್ಷ ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು. |
| ಇ) | ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಜಿಲ್ಲೆಯಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶದ ಒತ್ತುವರಿದಾರರ ವಿವರ ನೀಡುವುದು; (ತಾಲ್ಲೂಕುವಾರು, ಗ್ರಾಮವಾರು ಕೈಗೊಂಡ | ತುಮಕೂರು ವಿಭಾಗದ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಈವರೆಗೆ ಒಟ್ಟು 4001 ಪ್ರಕರಣಗಳಲ್ಲಿ 8024.70 ಎಕರೆ ಜಮೀನು ಒತ್ತುವರಿ/ಭೂ ಮಂಜೂರಾತಿಯಾಗಿರುವುದು ಕಂಡು ಬಂದಿರುತ್ತದೆ. ಒತ್ತುವರಿದಾರರ ವಿವರಗಳನ್ನು **ಅನುಬಂಧ-2 ರಲ್ಲಿ** ಒದಗಿಸಿದೆ. ಒತ್ತುವರಿದಾರರ ವಿರುದ್ಧ ಈವರೆಗೆ ಒಟ್ಟು 502 ಪ್ರಕರಣಗಳನ್ನು ದಾಖಲಿಸಲಾಗಿದ್ದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64ಎ ರಡಿಯಲ್ಲಿ ಸಹಾಯಕ ಅರಣ್ಯ |

ಕ್ರಮಗಳೇನು)

ಸಂರಕ್ಷಣಾಧಿಕಾರಿ. ತುಮಕೂರು. ಮಧುಗಿರಿ ಹಾಗೂ ತಿಪಟೂರು ಉಪವಿಭಾಗ ರವರು ಈವರೆಗೆ 102 ಪ್ರಕರಣಗಳು. 672-00 ಎಕರೆ ಒತ್ತುವರಿ ತೆರವುಗೊಳಿಸಲು ಆದೇಶ ಹೊರಡಿಸಿದ್ದು; ಈ ಪೈಕಿ 42 ಪ್ರಕರಣಗಳಲ್ಲಿನ 145.39 ಎಕರೆಯನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿರುತ್ತದೆ.

ತಾಲ್ಲೂಕುವಾರು ವಿವರಗಳನ್ನು **ಅನುಬಂಧ-3 ರಲ್ಲಿ** ಒದಗಿಸಿದೆ

ಈ) ಸಾಮಾಜಿಕ ಅರಣ್ಯ ಮೀಸಲು ಅರಣ್ಯ ಮತ್ತು ಡೀಮ್ಡ್ ಆರಣ್ಯಗಳಲ್ಲಿ ಅರಣ್ಯೀಕರಣ ಮಾಡಲಾಗಿದೆಯೇ: ಮಾಡಲಾಗಿದ್ದರೆ ಕಳೆದ ಹತ್ತು ವರ್ಷಗಳಲ್ಲಿ ಅರಣ್ಯೀಕರಣಕ್ಕೆ ಮಾಡಲಾದ ವೆಚ್ಚವೆಷ್ಟು; ಯಾವ ಪ್ರಭೇದದ ಗಿಡಗಳನ್ನು ನೆಡಲಾಗಿದೆ: ವರ್ಷವಾರು, ಅರಣ್ಯವಾರು ವಿವರ ನೀಡುವುದು?

| ಕ್ರ. ಸಂ | ವರ್ಷ | ನೆಡುತೋಪು ನಿರ್ಮಾಣ (ಹೆಕ್ಟೇರ್) | ಭರಿಸಿರುವ ವೆಚ್ಚ (ರೂ. ಲಕ್ಷಗಳಲ್ಲಿ) | ನೆಟ್ಟ ಗಿಡಗಳು |
|---|---|---|---|---|
| 1 | 2013-14 | 1,220.00 | 229.23 | ಹೊನ್ನೆ, ಶ್ರೀಗಂಧ, ಹೊಳೆಮತ್ತಿ, ತಪಸಿ, ಕಮರ, ಸಿಮಾರೂಬ, ಆಲ, ತಾರೆ, ಬೋರೆ, ಊವರ್ಶಿ, ಕಾಡು ಬಾದಾಮಿ, ಗೋಣಿ, ಕರಿಮತ್ತಿ, ಬಸರಿ, ಹೊಂಗೆ ಇತ್ಯಾದಿ ಗಿಡಗಳನ್ನು ನೆಡಲಾಗಿರುತ್ತದೆ. |
| 2 | 2014-15 | 1,238.45 | 332.29 | |
| 3 | 2015-16 | 2,352.40 | 555.374 | |
| 4 | 2016-17 | 1757.69 | 614.942 | |
| 5 | 2017-18 | 2,065.63 | 977.543 | |
| 6 | 2018-19 | 1,350.55 | 435.290 | |
| 7 | 2019-20 | 2,002.71 | 800.065 | |
| 8 | 2020-21 | 2,762.00 | 1510.020 | |
| 9 | 2021-22 | 903.00 | 564.321 | |
| 10 | 2022-23 | 1,160.00 | 367.767 | |
| 11 | 2023-24 | 747.38 | 452.458 | |

ಉ) ಶಿರಾ ತಾಲ್ಲೂಕಿನ ಮುದಿಗೆರೆ ಕಾವಲ್‌ನಲ್ಲಿ ಇರುವ ಅರಣ್ಯವನ್ನು ಮೀಸಲು ಅರಣ್ಯ ಎಂದು ಯಾವಾಗ ಅಧಿಸೂಚನೆ ಹೊರಡಿಸಲಾಗಿದೆ: ಸದರಿ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ಮತ್ತು ಸದರಿ ಅರಣ್ಯದಲ್ಲಿ ಯಾವ

ಶಿರಾ ತಾಲ್ಲೂಕು, ಕಸಬಾ ಹೋಬಳಿ, ಮುದಿಗೆರೆ ಅಮೃತ್ ಮಹಲ್ ಕಾವಲ್ ಸ.ನಂ. 12 ರಲ್ಲಿನ 3025-00 ಎಕರೆಯನ್ನು ಅಧಿಸೂಚನೆ ಸಂಖ್ಯೆ No. AF 5515-Ft.161-41-2 dated 06th April 1942 (ಅನುಬಂಧ-2) ರಲ್ಲಿ "ಮುದಿಗೆರೆ ಬ್ಲಾಕ್" "ಸ್ಟೇಟ್ ಫಾರೆಸ್ಟ್" ಎಂದು ಮೈಸೂರು ಮಹಾರಾಜರ ಸರ್ಕಾರವು ಸೆಕ್ಷನ್-17 ಮೈಸೂರು ಅರಣ್ಯ ಕಾಯ್ದೆ 1900 ರಲ್ಲಿ ಆದೇಶ ಹೊರಡಿಸಿರುತ್ತದೆ.
ಮುದಿಗೆರೆ ಮೀಸಲು ಅರಣ್ಯ ಪ್ರದೇಶದಲ್ಲಿ ತುಗ್ಗಲಿ, ತೆರೆದು, ಹೊನ್ನೆ, ಹೊಂಗೆ, ಕಮರ, ಅರಳಿ, ನೀಲಗಿರಿ, ಅಕೇಶಿಯಾ ಇತ್ಯಾದಿ ಮರಗಳು ಇರುತ್ತವೆ.

| | | |
|---|---|---|
| | ಜಾತಿ ಕಾಡುಮರಗಳಿವೆ: | |
| ಊ) | ಶಿರಾ ತಾಲ್ಲೂಕು ಬುಕಾ ಪಟ್ಟಣ ತಾಲ್ಲೂಕಿನ ವನ್ಯ ಜೀವಿಧಾಮದಲ್ಲಿ ಅಳವಿನಂಚಿನಲ್ಲಿರುವ ಚಿಂಕಾರ (ಹುಲ್ಲೇಕರ) ಪ್ರಾಣಿಗಳ ರಕ್ಷಣೆಗೆ ಆರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು: | ಬುಕ್ಕಾ ಪಟ್ಟಣ ಚಿಂಕಾರ ವನ್ಯಜೀವಿ ಧಾಮದಲ್ಲಿ ಇರುವ ಚಿಂಕಾರಗಳಿಗೆ ಆಹಾರ, ನೀರು ಒದಗಿಸಲು ಪೂರಕವಾಗಿರುವಂತೆ ಹಾಲಿ ಇರುವ ಹುಲ್ಲು ಗಾವಲುಗಳಲ್ಲಿ ಲಂಟಾನಾಗಳನ್ನು ತೆರವುಗೊಳಿಸಿ ಆಹಾರಕ್ಕಾಗಿ ಹುಲ್ಲಿನ ಬೀಜ ಬಿತ್ತುವುದು ಹಾಗೂ ವಿವಿಧ ಜಾತಿಯ ಹುಲ್ಲುಗಳನ್ನು ನಾಟಿ ಮಾಡುವ ಮುಖಾಂತರ ಆಹಾರವನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ ಹಾಲಿ ಇರುವ ಕಟ್ಟೆಗಳಲ್ಲಿ ಹೂಳು ತೆಗೆಯುವುದು, ನಾಲಾಬದು, ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡಿ ನೀರಿನ ಸಂಗ್ರಹವನ್ನು ಹೆಚ್ಚಿಸಲಾಗಿದೆ.<br>ಕಳ್ಳಬೇಟೆ ಶಿಭಿರಗಳನ್ನು ಸ್ಥಾಪಿಸಿ ಹಗಲು ರಾತ್ರಿ ಸಿಬ್ಬಂದಿಗಳು, ಗಸ್ತು ಕಾರ್ಯ ಕೈಗೊಂಡಿದ್ದು ಕಳ್ಳಬೇಟೆ ಸಂಭವಿಸದಂತೆ ನಿರಂತರವಾದ ನಿಗಾವಹಿಸಲಾಗಿದೆ. |
| ಋ) | ಬೇಸಿಗೆಯಲ್ಲಿ ಕಾಡಿಗೆ ಬೆಂಕಿ ಹಚ್ಚುವ ಮೂಲಕ ಗಿಡ-ಮರ ಗಿಡಮೂಲಿಕೆ ಔಷದ ಗುಣ ಹೊಂದಿರುವ ಬಳ್ಳಿ-ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಹೌದು. ಕಾಡ್ಗಿಚ್ಚಿನಿಂದ ಅರಣ್ಯ ನಾಶ ತಡೆಯಲು ಈ ಕೆಳಕಂಡಂತೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಬೆಂಕಿ ರೇಖೆಗಳನ್ನು ನಿರ್ಮಾಣ ಮಾಡುವುದು.<br>• ಅರಣ್ಯ ಪ್ರದೇಶದಲ್ಲಿ ನಿರ್ಮಾಣ ಮಾಡಿರುವ ಹಳೆಯ ಬೆಂಕಿ ರೇಖೆಗಳನ್ನು ನಿರ್ವಹಣೆ ಮಾಡುವುದು.<br>• ಬೇಸಿಗೆ ಕಾಲದ ಸಂದರ್ಭದಲ್ಲಿ ಜನವರಿಯಿಂದ ಏಪ್ರಿಲ್ ಅಂತ್ಯದ ವರೆಗೆ ಬೆಂಕಿ ನಿಯಂತ್ರಣ ಕಾವಲುಗಾರರನ್ನು ನೇಮಿಸಿಕೊಂಡು ಬೆಂಕಿ ಬೀಳದಂತೆ ತಡೆಗಟ್ಟುವುದು.<br>• ಅರಣ್ಯದ ಅಂಚಿನ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಕರ ಪತ್ರಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಬೆಂಕಿ ಬೀಳದಂತೆ ತಡೆಗಟ್ಟಲು ತಿಳುವಳಿಕೆ ನೀಡುವುದು.<br>• ಅರಣ್ಯ ಪ್ರದೇಶದಲ್ಲಿ ಲಾಂಟಾನ ಇರುವ ಪ್ರದೇಶಗಳನ್ನು ಗುರುತಿಸಿ ಲಾಂಟನವನ್ನು ತೆಗೆಸಿ ಬೆಂಕಿ ಬೀಳದಂತೆ ತಡೆಗಟ್ಟಲಾಗುವುದು.<br>• ರಾತ್ರಿ ವೇಳೆಯಲ್ಲಿ ಇಲಾಖಾ ವಾಹನಗಳಲ್ಲಿ ಸಿಬ್ಬಂದಿಗಳು ಗಸ್ತು ತಿರುಗಿ ಬೆಂಕಿ ಬೀಳದಂತೆ ಮುಂಜಾಗ್ರತೆ ವಹಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 145 ಎಫ್‌ಎಫ್ 2024

(ಈಶ್ವರ ಬಿ. ಖಂಡ್ರೆ)
ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಸಚಿವರು